


# ಬಲಾಢ್ಯ ವ್ಯಕ್ತಿ

ಚಿತ್ರದಲ್ಲಿರುವ ಈ ವ್ಯಕ್ತಿಯ ಹೆಸರು ಮಂಜಿತ್ ಸಿಂಗ್. ಮೊದಲು ಪಂಜಾಬ್‌ನ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಈತ 1977 ರಿಂದ ಬ್ರಿಟನ್‌ನ ಲೀಸ್ಸರ್‌ಶೈರ್‌ನಲ್ಲಿ ವಾಸವಾಗಿದ್ದಾನೆ. ಭಾರತೀಯ ಮೂಲದವನಾದ ಈತ ತುಂಬ ಶಕ್ತಿಶಾಲಿ ಮನುಷ್ಯ.

ದೊಡ್ಡ ಗಾತ್ರದ ವಸ್ತುಗಳನ್ನು ಎಳೆಯುವುದರಲ್ಲಿ ಮಂಜಿತ್ ಬಲು ನಿಸ್ಸೀಮ. ಈತನ ಗಿನ್ನಿಸ್ ವಿಶ್ವ ದಾಖಲೆಗಳು ಒಂದೆರಡಲ್ಲ. ಬರೋಬ್ಬರಿ 31 ಗಿನ್ನಿಸ್ ವಿಶ್ವ ದಾಖಲೆಗಳನ್ನು ಈತ ಮುರಿದಿದ್ದಾನೆ!

ಖಾಲಿ ಡಬ್ಬಲ್ ಡೆಕ್ಕರ್ ಬಸ್ ಅನ್ನು 55 ಅಡಿಗಳಷ್ಟು ದೂರಕ್ಕೆ ಹಲ್ಲಿನಿಂದ ಎಳೆಯುತ್ತಾನೆ. ಡಬ್ಬಲ್ ಡೆಕ್ಕರ್ ಬಸ್ಸಿನಲ್ಲಿ 54 ಜನ ಪ್ರಯಾಣಿಕರನ್ನು ಕೂರಿಸಿಕೊಂಡು ಬರೀ ಒಂದೇ ಕೈಯಿಂದ 180 ಅಡಿಗಳಷ್ಟು ದೂರಕ್ಕೆ ಕ್ರಮಿಸಬಲ್ಲ. ಅದೇ ಬಸ್ಸಿನಲ್ಲಿ 30 ಜನ ಪ್ರಯಾಣಿಕರನ್ನು ಕೂರಿಸಿಕೊಂಡು ತನ್ನ ಜುಟ್ಟಿ (ಪೋನಿ ಟೈಲ್) ನಿಂದ 256 ಅಡಿಗಳಷ್ಟು ದೂರ ಸಾಗಬಲ್ಲ, ಕಿವಿಯಿಂದ 85 ಕೆ.ಜಿ ಗಳಷ್ಟು ಭಾರ ಎತ್ತುವ ಈತ ಕಿವಿಯಿಂದಲೇ 8 ಟನ್ ಭಾರದ ಸಂಚಾರಿ ಗ್ರಂಥಾಲಯವನ್ನು ಎಂಟು ಮೀಟರ್ ದೂರದವರೆಗೆ ಎಳೆದಿದ್ದಾನೆ. ಅಲ್ಲದೆ 203,000 ಪೌಂಡ್ (ಸುಮಾರು 92,272 ಕೆ.ಜಿ) ಗಳಷ್ಟು ಭಾರೀ ಭಾರದ ಬಾಂಬರ್ ವಿಮಾನವನ್ನು ಆರು ಇಂಚಿನಷ್ಟು ದೂರದವರೆಗೂ ಎಳೆದು ವಿಶ್ವ ದಾಖಲೆ ಮಾಡಿದ್ದಾನೆ. ಇಷ್ಟೇ ಅಲ್ಲದೆ ಹದಿನಾಲ್ಕು ಕೆ.ಜಿ ಯಷ್ಟು ತೂಕವನ್ನು ಕಣ್ಣಿನ ರೆಪ್ಪೆಯಿಂದ ಎತ್ತಿ ಹೊಸ ವಿಶ್ವ ದಾಖಲೆಯ ಕೀರ್ತಿಯನ್ನು ಮುಡಿಗೇರಿಸಿಕೊಂಡಿದ್ದಾನೆ. 'ಬ್ರಿಟನ್ ಗಾಟ್ ಟ್ಯಾಲೆಂಟೆಡ್ ಟಿವಿ ಶೋ' ಆಡಿಷನ್ ವೇಳೆಯಲ್ಲಿ ಮಿನಿ ವ್ಯಾನ್ ಅನ್ನು ಕಿವಿಯಿಂದ ಎಳೆದು ತೋರಿಸಿದುದಲ್ಲದೆ ಹಾಟ್ ವಾಟರ್ ಬ್ಯಾಗ್ ಅನ್ನು ಒಡೆಯುವಂತೆ ಊದಿ ನಿರ್ಣಾಯಕರು ಬೆಕ್ಕಸ ಬೆರಗಾಗುವಂತೆ ಮಾಡಿದ್ದಾನೆ.

ದಿನಾ ಮೈಲುಗಟ್ಟಲೆ ಓಡುವ ಈತ ತಪ್ಪದೇ ವ್ಯಾಯಾಮವನ್ನು ಮಾಡುತ್ತಾನೆ. ಬಾಲ್ಯದಲ್ಲಿದ್ದಾಗ ಚಿಕ್ಕಪ್ಪ ಮಾಡುತ್ತಿದ್ದ ಕಸರತ್ತು ಈತನಿಗೆ ಪ್ರೇರಣೆಯಂತೆ. "ನಾನು ದಿನಾ ಆರು ಗಂಟೆಗೆ ಎದ್ದು ಯೋಗ ಮಾಡುತ್ತೇನೆ. ಇತರ ಯೋಚನೆಗಳನ್ನೆಲ್ಲಾ ಮರೆತು ಮನಸ್ಸನ್ನು ಗುರಿಯತ್ತ ಕೇಂದ್ರೀಕರಿಸಲು ಧ್ಯಾನ ಸಹಕಾರಿ" ಎನ್ನುವ ಮಂಜಿತ್ ಸಿಂಗ್ ಸೆಕ್ಯುರಿಟಿ ಕಂಪೆನಿಯೊಂದನ್ನು ಸ್ಥಾಪಿಸಿದ್ದಾನೆ. ಜೊತೆಗೆ ಈತನ ಹುಟ್ಟೂರು ಮಹಿಲ್ಪುರ್ ಎಂಬ ಹಳ್ಳಿಯಲ್ಲಿ ಮಂಜಿತ್ ಫಿಟ್‌ನೆಸ್ ಅಕಾಡೆಮಿಯನ್ನು ಹುಟ್ಟು ಹಾಕಿದ್ದಾನೆ. ಒಂದಿಷ್ಟು ಸಮಾಜಕಾರ್ಯವನ್ನು ಮಾಡುವ ಈತ ತನ್ನ ಸಾಹಸದಿಂದ ಬಂದ ಹಣವನ್ನು ಬಡ ಮಕ್ಕಳ ನೆರವಿಗೆಂದು ದೇಣಿಗೆ ನೀಡುತ್ತಿದ್ದಾನೆ.

ಈತನ ಇಬ್ಬರು ಹೆಣ್ಣು ಮಕ್ಕಳು ಸಹ ಅಪ್ಪನಿಗಿಂತ ಸಾಹಸದಲ್ಲಿ ಕಡಿಮೆಯೇನಿಲ್ಲ. ಕಿರಿಯ ವಯಸ್ಸಿನಲ್ಲೇ ಭಾರೀ ಭಾರವನ್ನು ಜುಟ್ಟುಗಳಿಂದ ಎಳೆದು ವಿಶ್ವ ದಾಖಲೆಯನ್ನು ಮಾಡಿದ್ದಾರೆ.

ಭಾರತೀಯ ಸಂಜಾತ ಮಂಜಿತ್ ಸಿಂಗ್ ಬ್ರಿಟನ್‌ನಲ್ಲಿ 'ಐರನ್ ಲಯನ್ ಆಫ್ ಲೀಸ್ಸರ್‌ಶೈರ್' ಎಂದು ಗುರುತಿಸಿಕೊಂಡಿದ್ದಾನೆ.

■ ವಿದ್ಯಾ ವಿ ಹಾಲಭಾವಿ

